**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ:ಎ8/ದ್ವಿ.ಪ್ರ.ಆನ್/37/2020-21 ದಿನಾಂಕ:16.12.2020

**:: ಸುತ್ತೋಲೆ ::**

ವಿಷಯ:- ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ದ್ವಿತೀಯ/ತೃತೀಯ/ನಾಲ್ಕನೇ/ಅನುತ್ತೀರ್ಣ ಅಂಕಪಟ್ಟಿ ಪಡೆಯುವ ಆನ್‌ಲೈನ್ ಸೇವೆಯಲ್ಲಿ ಮಾರ್ಪಾಡು ಮಾಡಿರುವ ಬಗ್ಗೆ.

ಉಲ್ಲೇಖ:- 1) ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ : 15.10.2020
2) ಹಿರಿಯ ಸಹಾಯಕ ನಿರ್ದೇಶಕರು, ಗಣಕಶಾಖೆರವರ ಟಿಪ್ಪಣಿ ದಿನಾಂಕ:04.12.2020

* * * * * *

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪ್ರಗತಿ-10ರ ಯೋಜನೆಯಡಿಯಲ್ಲಿ ವಿವಿಧ ಸೇವೆಗಳನ್ನು ಆನ್‌ಲೈನ್ ವ್ಯಾಪ್ತಿಗೆ ಒಳಪಡಿಸುತ್ತಿದ್ದು, ಈ ನಿಟ್ಟಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅಂಕಪಟ್ಟಿ ಕಳೆದುಕೊಂಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ದ್ವಿತೀಯ/ತೃತೀಯ/ನಾಲ್ಕನೇ ಪ್ರತಿಯ ಅಂಕಪಟ್ಟಿ ಮತ್ತು ಅನುತ್ತೀರ್ಣರಾದ ಅಭ್ಯರ್ಥಿಗಳು ಅನುತ್ತೀರ್ಣ ಅಂಕಪಟ್ಟಿ ಪಡೆಯುವ ಸೇವೆಯನ್ನು ಆನ್‌ಲೈನ್ ಮೂಲಕ ನಿರ್ವಹಿಸುವ ಕುರಿತು ದಿನಾಂಕ:15.10.2020ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ.

ಮುಂದುವರೆದು, ಸದರಿ ತಂತ್ರಾಂಶವನ್ನು ಮತ್ತಷ್ಟು ಸರಳೀಕರಿಸುವ ದೃಷ್ಟಿಯಿಂದ ಈ ಕೆಳಕಂಡಂತೆ ಪ್ರಕ್ರಿಯೆಯಲ್ಲಿ ಮಾರ್ಪಾಡುಗೊಳಿಸಲಾಗಿದೆ.

1) **ಅಭ್ಯರ್ಥಿಗಳು ಅನುಸರಿಸಬೇಕಾದ ಕ್ರಮಗಳ ಮಾರ್ಪಾಡು** :
   - ಅಭ್ಯರ್ಥಿ ಅಥವಾ ಅಭ್ಯರ್ಥಿಯ ಅಂಕಪಟ್ಟಿಯಲ್ಲಿ ನಮೂದಾಗಿರುವ ಪೋಷಕರು (ತಂದೆ/ತಾಯಿ) ಅರ್ಜಿ ಸಲ್ಲಿಸಬಹುದಾಗಿದೆ.
   - ಅರ್ಜಿ ಸಲ್ಲಿಸುವ ಮುನ್ನ ಕೋರಿಕೆ ಅರ್ಜಿ, ಅಫಿಡವಿಟ್‌ನ ಪ್ರತಿ, ಆಧಾರ್ ಕಾರ್ಡ್ ಮತ್ತು ಅಂಕಪಟ್ಟಿಯ ಪ್ರತಿ (ಲಭ್ಯವಿದ್ದಲ್ಲಿ) ಗಳನ್ನು pdf ನಮೂನೆಯಲ್ಲಿ 500kb To 01mb ಅಳತೆಯಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡು ಅಪ್‌ಲೋಡ್ ಮಾಡುವುದು.
   - ಕೋರಿರುವ ಸೇವೆಗೆ ಅನುಗುಣವಾಗಿ ಸೇವಾಶುಲ್ಕವನ್ನು ಆನ್‌ಲೈನ್ ಮೂಲಕವೇ ಸೃಜಿಸಿಕೊಂಡ ಚಲನ್ (Cash Payment) ಉಪಯೋಗಿಸಿಕೊಂಡು ಬ್ಯಾಂಕ್ ಮೂಲಕ ಇಲ್ಲವೇ ಆನ್‌ಲೈನ್ ಮುಖೇನ (Debit Card, Credit Card & Internet Banking) ಪಾವತಿಸಬಹುದಾಗಿದೆ.

2) **ಶಾಲಾ ಮುಖ್ಯಶಿಕ್ಷಕರು ಅನುಸರಿಸಬೇಕಾದ ಕ್ರಮಗಳ ಮಾರ್ಪಾಡು** : ಈ ಹಂತವನ್ನು ರದ್ದುಪಡಿಸಿ ಅಭ್ಯರ್ಥಿಯು ಆನ್‌ಲೈನ್ ಮುಖಾಂತರ ಅರ್ಜಿಯನ್ನು ನೇರವಾಗಿ ವಿಭಾಗೀಯ ಕಛೇರಿಯ ಲಾಗಿನ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

3) **ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಮಾರ್ಪಾಡು** : ಈ ಹಂತವನ್ನು ರದ್ದುಪಡಿಸಿ ಅಭ್ಯರ್ಥಿಯು ಆನ್‌ಲೈನ್ ಮುಖಾಂತರ ಅರ್ಜಿಯನ್ನು ನೇರವಾಗಿ ವಿಭಾಗೀಯ ಕಛೇರಿಯ ಲಾಗಿನ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

4) **ಮಂಡಳಿಯ ವಿಭಾಗೀಯ ಕಛೇರಿಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಮಾರ್ಪಾಡು** :

- ವಿಭಾಗೀಯ ಕಛೇರಿಯಲ್ಲಿ ಅಂಕಪಟ್ಟಿಗಳನ್ನು ವಿತರಿಸುವ ಮುನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿನ ಅಭ್ಯರ್ಥಿಯ ವಿವರಗಳನ್ನು (ಅಭ್ಯರ್ಥಿಯ ಹೆಸರು, ತಂದೆಯ ಹೆಸರು) ಅಪ್‌ಲೋಡ್ ಮಾಡಿರುವ ಆಧಾರ್ ಕಾರ್ಡ್‌ನೊಂದಿಗೆ ಪರಿಶೀಲಿಸುವುದು ಮತ್ತು ಅಂಕಪಟ್ಟಿಯನ್ನು ನೋಂದಾಯಿತ ಅಂಚೆಯ ಮೂಲಕ ಅರ್ಜಿದಾರನ ಆಧಾರ್ ಕಾರ್ಡ್‌ನಲ್ಲಿರುವ ವಿಳಾಸಕ್ಕೆ ರವಾನಿಸುವುದು.

ಮಂಡಳಿಯು ಒದಗಿಸುತ್ತಿರುವ ವಿವಿಧ ಸೇವೆಗಳನ್ನು ಡಿಜಿಟಲ್ ಪ್ರಕ್ರಿಯೆಗೆ ಒಳಪಡಿಸುತ್ತಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದ್ವಿತೀಯ/ತೃತೀಯ/ನಾಲ್ಕನೇ ಅಂಕಪಟ್ಟಿ ಮತ್ತು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅನುತ್ತೀರ್ಣ ಅಂಕಪಟ್ಟಿ ಪಡೆಯುವ ಸೇವೆಗಾಗಿ ಅರ್ಜಿಯನ್ನು ಭೌತಿಕವಾಗಿ ಪಡೆಯುವುದನ್ನು ನಿಲ್ಲಿಸಿ, ಆನ್‌ಲೈನ್ ಮೂಲಕ ಸಕಾಲದಲ್ಲಿ ಸೇವೆಯನ್ನು ಒದಗಿಸಲು ಕ್ರಮವಹಿಸುವುದು.

ಮೇಲಿನ ಅಂಶಗಳನ್ನು ಹೊರತುಪಡಿಸಿ ದಿನಾಂಕ:15.10.2020ರ ಸುತ್ತೋಲೆಯ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುವುದು.

(ಸುಮಂಗಲ.ವಿ) 16/11

ನಿರ್ದೇಶಕರು, ಪರೀಕ್ಷೆಗಳು

ಗೆ:-

1. ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ವಿಭಾಗೀಯ ಕಛೇರಿ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿತ್ತಾ ಸದರಿ ಸುತ್ತೋಲೆಯನ್ನು ಮಂಡಳಿಯ ವೆಬ್‌ಸೈಟ್ http://www.kseeb.kar.nic.in ನಲ್ಲಿ ಪ್ರಕಟಿಸುವುದು.
5. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ).
6. ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ.
7. ಕಛೇರಿ ಪ್ರತಿ.